ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಸಂಪೂರ್ಣವಾದಂತಹ ಅಧಿಕಾರವನ್ನು ನೀಡಲಾಗಿದೆ ಎಂದು ಹೇಳಿ ಸರ್ಕಾರದ ವತಿಯಿಂದ ಆದೇಶವನ್ನು ಹೊರಡಿಸಲಾಗಿದೆ. ಆದರೆ ಯಾವ ನಿರ್ವಹಣೆಯನ್ನು ಮಾಡುವಂತಹ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರು ಹೊಂದಿರುತ್ತಾರೆ. ಅವರ ಮೇಲೆ ತನಿಖೆಯಾಗಿ ಮುಂದೆ ಕಾರ್ಯ ನಿರ್ವಾಹಕ ಅಧಿಕಾರಿಗಳು ತನಿಖೆ ನಡೆಸುವಂತಹ ಅರ್ಹತೆ ಇದೆಯೋ ಎಂದು ನನ್ನ ಪ್ರಶ್ನೆಯಾಗಿದೆ. ನಾನು ಸಂಬಂಧಪಟ್ಟ ಕಡತಗಳನ್ನು ತಂದಿದ್ದೇನೆ, ಅದನ್ನು ತಮಗೆ ಕಳುಹಿಸಕೊಡುತ್ತೇನೆ, ತಾವು ಅಲ್ಪ ಸಂಖ್ಯಾತರ ಬಗ್ಗೆ ಇಟ್ಟಿರುವಂತಹ ವಿಶ್ವಾಸ, ಪ್ರೀತಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಅವರು ಇದನ್ನು ಉನ್ನತ ಮಟ್ಟದ ಅಧಿಕಾರಿಗಳಿಂದ ತನಿಕೆ ನಡೆಸುತ್ತೇನೆಂದರೆ ಸಾಕು, ನಂತರ ಈ ದಾಖಲೆಗಳನ್ನು ಒದಗಿಸತಕ್ಕಂಥದ್ದು, ಸಭೆಯ ನಡವಳಿಕೆಗಳನ್ನು ಒದಗಿಸತಕ್ಕಂಥದ್ದು. ಇದರ ಮಧ್ಯೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಶಾಲಾ ಶೈಕ್ಷಣಿಕ ಸಮಿತಿಯನ್ನು ರಚಿಸಿರುವಂತಹ ಸಂದರ್ಭದಲ್ಲಿ ಈ ಶಾಲೆಯ ಅಧ್ಯಕ್ಷರಿಗೆ ನಮ್ಮ ರಾಷ್ಟ್ರಧ್ವಜಾರೋಹಣ ಮಾಡುವಂತಹ ಅಧಿಕಾರವನ್ನು ಹೊಂದಿರತಕ್ಕಂಥದ್ದ ಈ ಸಂಪ್ರದಾಯ ಬಹಳ ಹಿಂದಿನಿಂದಲೂ ನಮ್ಮದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಂದಿನಿಂದಲೂ ಈ ಧ್ವಜಾರೋಹಣಾ ಕಾರ್ಯಕ್ರಮವನ್ನು ಇಲ್ಲಿಯವರೆಗೂ ಮಾಡಿಕೊಂಡು ಬಂದಿದ್ದೇವೆ. ಆದರೆ 49 ಪಂಚಾಯತಗಳಲ್ಲಿ ಕೇವಲ ಇದು ಒಂದು ಪಂಚಾಯತಗೆ ಮಾತ್ರ 25ನೇ ತಾರೀಖು ಈ ಆದೇಶವನ್ನು ಹೊರಡಿಸುವಂತಹ ಅವಶ್ಯಕತೆ ಇತ್ತೆ? ಇದು ಒಂದೇ ನನ್ನ ಪ್ರಶ್ನೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ನಾನು ತಮಗೆ ಒಂದು ಭರವಸೆಯನ್ನು ಕೊಡುತ್ತೇನೆ. ಒಬ್ಬ ಮಾನ್ಯ ನಿರ್ವಾಹಕ ಅಧಿಕಾರಿ ನಿಷ್ಪಕ್ಷಪಾತವಾಗಿ ತನಿಖೆ ಮಾಡಬಹುದು. ಇಲ್ಲಿ ತನಿಖೆ ಮಾಡುವುದು ದೊಡ್ಡ ವಿಷಯವಲ್ಲ. ವಸ್ತುಸ್ಥಿತಿ ಏನು ಇದೆ. ಇಲ್ಲಿ ಕೊಟ್ಟಿರುವಂತಹ ಆಜ್ಞೆ ಅದು ನಿಜವಾಗಿ ಯಾರ ಆಜ್ಞೆಯಾಗಿದೆಯೊ,ಮುಖ್ಯವಾಗಿ ಕಾರ್ಯನಿರ್ವಾಹಕ ಅಧಿಕಾರಿ ಮಾಡಿದ್ದಾರೋ ಅಥವಾ ಅಧ್ಯಕ್ಷರು ಮಾಡಿದ್ದಾರೋ ಅಥವಾ ಅಧ್ಯಕ್ಷರ ರುಜುವನ್ನು ಬೇರೊಬ್ಬರು ಮಾಡಿದ್ದಾರೆ ಎಂದು ಇಷ್ಟು ವಿಷಯವನ್ನು ನನಗೆ ತಿಳಿಸಿದ ತಕ್ಷಣ ನಾನೇ ಸೂಕ್ತವಾದ ಕ್ರಮವನ್ನು ಕೈಗೊಳ್ಳಬಹುದು.

ಉಪ ಸಭಾಧ್ಯಕ್ಷರು : ಮಾನ್ಯ ಹೆಚ್. ಶಿವಪ್ಪ ಹಾಗೂ ಮಾನ್ಯ ಯು.ಬಿ. ಬಣಕಾರ್‌ರವರೆ ತಮ್ಮ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳು ಸಮಯಾವಕಾಶವನ್ನು ಕೇಳಿದ್ದಾರೆ. ಅದಕ್ಕಾಗಿ ತಮ್ಮ ವಿಷಯವನ್ನು ನಂತರ ತೆಗೆದುಕೊಳ್ಳುತ್ತೇವೆ.

ಆ) ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಮುಖಂಡರಾದ ಶ್ರೀ ಮಹೇಶ್ ಹೆಗಡೆ ಮತ್ತು ಅವರ ಸಂಗಡಿಗರು ದಲಿತ ಯುವ ಕಾರ್ಮಿಕ ಶ್ರೀರಾಮಕೃಷ್ಣ ಅವರ ಮೇಲೆ ನಡೆಸಿದ ಹಲ್ಲೆ.

ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಉಪಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ದಿ: 30-1-95 ರಂದು ಹಾಡು ಹಗಲೇ ಕಾಂಗ್ರೆಸ್ ಮುಖಂಡ ಶ್ರೀಮಹೇಶ್ ಹೆಗಡೆ

ಮತ್ತು ಆತನ ಸಂಗಡಿಗರು ದಲಿತ ಯುವ ಕಾರ್ಮಿಕ ಶ್ರೀ ರಾಮಕೃಷ್ಣರವರ ಕೊಲೆಗೆ ಸಂಬಂಧಪಟ್ಟ ವಿಚಾರ ಹಾಗೂ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇದುವರೆಗೂ ಈ ತಕ್ಷಣವೂ ಅಪರಾಧಿಗಳನ್ನು ಬಂಧಿಸದಿರುವ ಪೋಲೀಸ್ ನಿಷ್ಕ್ರಿಯತೆಯ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ತಮ್ಮ ಮೂಲಕ ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರುಗಳಾದ ಶ್ರೀ ಎಸ್. ಅಂಗಾರ, ಡಿ.ವಿ. ಸದಾನಂದ ಗೌಡ ಶ್ರೀ ಐ.ಎಂ. ಜಯರಾಮ ಶೆಟ್ಟಿ, ಕುಂಬೈ ಸುಂದರರಾವ್ ಮತ್ತು ಶ್ರೀ ರುಕ್ಮಯ್ಯ ಪೂಜಾರಿಯವರು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದಾರೆ. ಇವರ ಗಮನ ಸೆಳೆಯುವ ಸೂಚನೆಗೆ ನನ್ನ ಹೇಳಿಕೆಯ ಪ್ರತಿಯನ್ನು ತಮ್ಮ ಅನುಮತಿಯನ್ನು ಕೋರಿ ಸಭೆಯ ಮುಂದಿಡುತ್ತೇನೆ. ಇದು ಅಲ್ಲದೆ ದಿನಾಂಕ 27 ರಂದು ಮೂರು ಜನರನ್ನು ಅರೆಸ್ಟ ಮಾಡಿದ್ದಾರೆ. ಮತ್ತೆ ಏನಾದರೂ ವಿವರಗಳು ಬೇಕಾದಲ್ಲಿ ಮಾನ್ಯ ಸದಸ್ಯರುಗಳು ಕೇಳಿದರೆ ಹೇಳುತ್ತೇನೆ.

ದಲಿತ ಯುವ ಕಾರ್ಮಿಕರಾದ ಶ್ರೀ ರಾಮಕೃಷ್ಣರವರ ಕೊಲೆಗೆ ಸಂಬಂಧಪಟ್ಟಂತೆ, ದಿನಾಂಕ 31-12-1995ರಂದು ಬೆಳ್ಳಿಗೆ ಸುಮಾರು 11.30 ಗಂಟೆ ಸಮಯದಲ್ಲಿ ಪ್ರಕರಣದ ಫಿರ್ಯಾದಿ ಠಾಣೆಗೆ ಹಾಜರಾಗಿ ತನ್ನ ಫಿರ್ಯಾದಿಯಲ್ಲಿ ತಾನು ಶ್ರೀ ಸುಖಾನಂತ ಹೆಗ್ಡೆ ರವರು ರಾಮಕೃಷ್ಣ (ದಲಿತ), ನವೀನ ಮತ್ತು ಗಣಪರವರೊಂದಿಗೆ ಮೊಳ ಹಳ್ಳಿಯಿಂದ ಜನಹಳ್ಳಿಗೆ ಕಾಲುನಡಿಗೆಯಿಂದ ಹೋಗುತ್ತಿರುವಾಗ ಆರೋಪಿಗಳಾದ 1. ಮಹೇಶ್ ಹೆಗ್ಡೆ,2. ದಿನೇಶಹೆಗ್ಡೆ 3. ಲಕ್ಷ್ಮಣ ಹೆಗ್ಡೆ 4. ಗೌತಮ ಹೆಗ್ಡೆ 5. ಉದಯ ಹೆಗ್ಡೆ 6. ಪ್ರದೀಪ್ ಹೆಗ್ಡೆ ಮತ್ತು ಇತರ ನಾಲ್ಕು ಜನರುಗಳು ಆಯುಧಗಳೊಂದಿಗೆ ನಾಲ್ಕು ಮೋಟಾರ್ ಸೈಕಲಗಳಲ್ಲಿ ಬಂದು ರಾಮಕೃಷ್ಣ (ಮೃತ) ಮತ್ತು ನವೀನ ಎಂಬುವವರಿಗೆ ಹೊಡೆದು ಓಡಿ ಹೋಗಿರುತ್ತಾರೆ. ನಂತರ ಗಾಯಗೊಂಡ ರಾಮಕೃಷ್ಣ ಇವರು ಕುಂದಾಪುರ ಆಸ್ಪತ್ರೆಯಲ್ಲಿ ಅದೇ ದಿನ ಮೃತ ಹೊಂದಿರುತ್ತಾರೆ.

ಮೃತ ರಾಮಕೃಷ್ಣ ಕಲ್ಲುಗಣಿ ಮಾಲೀಕರಾದ ಸುಹಾನಂದ ಹೆಗ್ಡೆರವರ ಸಹಚರ, ನವೀನ್ ಕಲ್ಲುಗಣಿಯಲ್ಲಿ ಕಾವಲುಗಾರನಾಗಿ ಕೆಲಸ ಮಾಡಿಕೊಂಡಿದ್ದನು. (ಸುಖಾನಂದ ಹೆಗ್ಡೆರವರು ಮೇಲ್ಕಂಡ ಕೋಟ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 182:95ರಲ್ಲಿ ಫಿರ್ಯಾಧಿದಾರರಾಗಿರುತ್ತಾರೆ. ಮತ್ತೊಬ್ಬ ಕಲ್ಲುಗಣಿ ಮಾಲೀಕರಾದ ಮಹೇಶ್ ಹೆಗ್ಡೆ)ಕಾಂಗ್ರೆಸ್ -ಐ) ಕಾರ್ಯಕರ್ತ ಹಾಗೂ ಕಲ್ಲುಗಳ ವ್ಯಾಪಾರದಲ್ಲಿ ನವೀನರವರು ಎದುರಾಳಿಗಳು) ಸದರಿ ರಾಮಕೃಷ್ಣನನ್ನು ಜಾತಿ ಹಿಡಿದು (ದಲಿತ) ಥಳಿನದ ವಿಚಾರದಲ್ಲಿ ಕೋಟಾ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 170:95 ಕಲಂ 323, 506, ಭಾ. ದಂ. ಸಂ. ಹಾಗೂ ಕಲಂ ಉಪ ಕಲಂ 1 ಮತ್ತು 10 ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲಿನ ದೌರ್ಜನ್ಯ ವಿರೋಧ ಕಾಯ್ದೆ ಪ್ರಕಾರ ರಾಮಕೃಷ್ಣರವರ ದೂರಿನ ಮೇಲೆ ಸದರಿ ಮಹೇಶ್ ಹೆಗ್ಡೆ ಮೇಲೆ ಪ್ರಕರಣ ದಾಖಲಾಗಿರುತ್ತದೆ. ಈ ಪ್ರಕರಣವು ತನಿಖೆಯಾಗಿ 'ಬಿ' ಅಂತಿಮ ವರದಿಯನ್ನು ಕೋರ್ಟಿಗೆ ಸಲ್ಲಿಸಲಾಗಿರುತ್ತದೆ. ಇದಕ್ಕೆ ಮುಂಚೆ ಆರೋಪಿ ಮಹೇಶ್ ಹೆಗ್ಡೆ ರವರು ಹಳೆಯ

ದ್ವೇಷದಿಂದ ನವೀನ್ ರವರ ಕಲ್ಲುಗಣಿಯಲ್ಲಿ ಕಾವಲುಗಾರನಾಗಿ ಕೆಲಸ ಮಾಡಬಾರದೆಂದು ಮೃತ ರಾಮಕೃಷ್ಣರವರಿಗೆ ಬೆದರಿಕೆ ಹಾಗಿದ್ದು, ದಿನಾಂಕ : 31-12-95 ರಂದು ಆರೋಪಿ ಮಹೇಶ ಹೆಗ್ಡೆ ಮತ್ತು ಆತನ ಸಹಚರರು ತಿಳಿಸಿರುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರ ದೌರ್ಜನ್ಯ ನಿರೋಧಕ ಕಾಯ್ದೆ ಅನ್ವಯ ದಾಖಲಾದ ಪ್ರಕರಣ ಉಡುಪಿ ವಿಭಾಗದ ಡಿ.ಎಸ್.ಪಿ. ರವರಲ್ಲಿ ತನಿಖೆಯಲ್ಲಿರುತ್ತೆ. ಆರೋಪಿಗಳು ಸಂಭವನೀಯ ಮರೆ ಮಾಡಿಕೊಳ್ಳುವ ಸ್ಥಳಗಳನ್ನೆಲ್ಲಾ ಸ್ಥಳೀಯ ಪೋಲೀಸರು ಶೋಧಿಸಿದ್ದು, ಆರೋಪಿಗಳು ಪತ್ತೆಯಾಗಿರುವುದಿಲ್ಲ. ಆರೋಪಿಗಳು ಕೃತ್ಯ ನಡೆದ ರಾತ್ರಿಯಿಂದ ಗ್ರಾಮವನ್ನು ಬಿಟ್ಟು ಓಡಿ ಹೋಗಿರುತ್ತಾರೆ. ಪ್ರಕರಣದ ತನಿಖಾಧಿಕಾರಿಗಳಾದ ಸರ್ಕಲ್ ಇನ್ಸಪೆಕ್ಟರರವರು ಆರೋಪಿಗಳ ಪತ್ತೆಗಾಗಿ ಸಿಬ್ಬಂದಿ ತಂಡಗಳನ್ನು ಸಾಗರ, ಮುಂಬಯಿ ಬೆಂಗಳೂರು, ಶ್ರೀರಂಗಪಟ್ಟಣ ಮತ್ತು ಇತರೆ ಸ್ಥಳಗಳಿಗೆ ಕಳುಹಿಸಿಕೊಟ್ಟಿದ್ದು, ಆರೋಪಿಗಳ ಪತ್ತೆಗಾಗಿ ತೀವ್ರ ಶೋಧನೆ ಕ್ರಮ ಕೈಗೊಳ್ಳಲಾಗಿದೆ. ಆರೋಪಿಗಳು ಅಲ್ಲಿಗೆ ಪಾಪಾಸಾಗದೇ ಮಂಗಳೂರು ಸತ್ರ ನ್ಯಾಯಾಲಯದ ಮುಂದೆ ಶರಣಾಗತರಾಗಲು ದಿನಾಂಕ: 12-2-96 ರಂದು ಪ್ರಯತ್ನಪಟ್ಟಿರುವುದಾಗಿ ತಿಳಿದು ಬಂದಿರುತ್ತೆ. ಆಲ್ಲದೆ ಆರೋಪಿಗಳಾದ ದಿನೇಶ್ ಹೆಗ್ಡೆ ಮತ್ತು ಪ್ರದೀಪ್ ಹೆಗ್ಡೆ, ಉದಯ ಹೆಗ್ಡೆರವರು ನಿರೀಕ್ಷಣಾ ಜಮೀನನ್ನು ಪಡೆಯಲು ಪ್ರಯತ್ನಿಸಿರುವುದಾಗಿಯೂ ಆದರೆ ನ್ಯಾಯಾಲಯವರು ಸದರಿಯಾದ ಜಾಮೀನು ವಿಚಾರವಾಗಿ ದಿನಾಂಕ 26-2-96 ರಂದು ನ್ಯಾಯಾಲಯದ ಮುಂದೆ ಹಾಜರಾಗುವಂತೆ ನಿರ್ದೇಶಿಸಿರುವುದಾಗಿ ತಿಳಿದು ಬಂದಿರುತ್ತದೆ. ಸದರಿ ಆರೋಪಿಗಳು ನ್ಯಾಯಾಲಯದ ಮುಂದೆ ನಿರೀಕ್ಷಣಾ ಜಮೀನಿಗೋಸ್ಕರ ಮೊರೆ ಹೋಗುವುದಕ್ಕಿಂತ ಮುಂಚೆಯೇ ಅಂದರೆ ದಿನಾಂಕ 26-2-96ರ ಮುಂಚೆಯೇ ಆರೋಪಿಗಳನ್ನು ದಸ್ತಗಿರಿ ಮಾಡುವ ಸಲುವಾಗಿ ನಿರಂತರವಾದ ನಿಗಾ ಇಡಲಾಗಿದೆ.

ಮೃತ ರಾಮಕೃಷ್ಣನ ಶವವನ್ನು ಪಂಚರ ಮುಂದೆ ಶವ ಪರೀಕ್ಷೆಗೆ ಒಳಪಡಿಸಿ ಕುಂದಾಪುರ ಆಸ್ಪತ್ರೆಯಲ್ಲಿ ಪೋಸ್ಟಮಾರ್ಟಮಗಾಗಿ ಶವವನ್ನು ಕಳುಹಿಸಿಲಾಗಿತ್ತು. ಕುಂದಾಪುರ ವೈದ್ಯಾಧಿಕಾರಿಗಳು ಮರಣೋತ್ತರ ಶವ ಪರೀಕ್ಷೆಯನ್ನು ಮಾಡಿರುತ್ತಾರೆ.

ಕುಂದಾಪುರ ಆಸ್ಪತ್ರೆಯಲ್ಲಿ ಮೃತ ರಾಮಕೃಷ್ಣನ ಶವ ಪರೀಕ್ಷೆಯನ್ನು ನಡೆಸಿದ ನಂತರ ಈ ಬಗ್ಗೆ ಲಿಖಿತ ವರದಿ ಪೋಲೀಸರಿಗೆ ಲಭ್ಯವಾಗುವ ಮುಂಚೆಯೇ ರಾಮಕೃಷ್ಣನ ಸಾವು ಹೃದಯ ಸ್ತಂಭದಿಂದ (ಕಾರ್ಡಿಯಕ್ ಅರೆಸ್ಟ್) ಉಂಟಾಗಿದೆಯೆಂಬ ವರ್ತಮಾನವು ಹೇಗೊ ತಿಳಿದು ಬಂದಿರುತ್ತದೆ. ಇದರಿಂದ ರೊಚ್ಚಿಗೆದ್ದು ದಲಿತರು ಸ್ಥಳೀಯ ನಾಯಕರ ಮುಖಂಡತ್ವದಲ್ಲಿ ಆಸ್ಪತ್ರೆಗೆ ಬಂದು ದಿನಾಂಕ 1-1-96 ರಂದು ಪ್ರದರ್ಶನ ನಡೆಸಿದರು. ಅಧಿಕಾರಿಗಳು ಗುಂಪನ್ನು ಸಮಾಧಾನ ಮಾಡಲು ಪ್ರಯತ್ನಿಸಿದರು. ಹೆಚ್ಚುವರಿ ಪೋಲೀಸ್ ಅಧೀಕ್ಷಕರು, ಆಸ್ಪತ್ರೆಗೆ ಭೇಟಿ ನೀಡಿರುತ್ತಾರೆ. ಈ ಭರವಸೆಗಳಿಂದ ತೃಪ್ತಿಯಾಗದ ಕಾರಣ ಪ್ರಕರಣದ ತನಿಖೆ ಕೈಗೊಂಡ ಪೋಲೀಸ್ ಇನ್ಸಪೆಕ್ಟರ್‌ರವರು ಕುಂದಾಪುರದ ಹೊರಗಿನ ಇಬ್ಬರು ವೈದ್ಯಾಧಿಕಾರಿಗಳಿಂದ ಶವವನ್ನು ಎರಡನೇ ಶವ ಪರೀಕ್ಷೆಗೆ ಒಳಪಡಿಸಿರುತ್ತಾರೆ. ಉಡುಪಿಯಿಂದ ಇಬ್ಬರು ವೈದ್ಯಾಧಿಕಾರಿಗಳು ಕುಂದಾಪುರಕ್ಕೆ ಬಂದು ಶವ ಪರೀಕ್ಷೆ ನಡೆಸಿರುತ್ತಾರೆ. ಎರಡನೇ ಶವ

ಪರೀಕ್ಷೆಯ ವರದಿಯು ತನಿಖಾಧಿಕಾರಿಗೆ ಲಭ್ಯವಾಗಿರುತ್ತದೆ. ವರದಿಯಲ್ಲಿ ತಮ್ಮ ಅಭಿಪ್ರಾಯವನ್ನು ಪೆತಾಲಜಿ ತಜ್ಞರ ವರದಿಗಾಗಿ ಮೀಸಲಿಟ್ಟಿರುತ್ತಾರೆ. ಪ್ರಕರಣವು ತನಿಖೆಯಲ್ಲಿದೆ.

ಶ್ರೀ ಎಸ್. ಅಂಗಾರ : ಮಾನ್ಯ ಉಪಾಧ್ಯಕ್ಷರೆ, ಕುಂದಾಪುರದ ಒದೆರ ಹೋಬಳಿ ಗ್ರಾಮ ಭರತ್ಕಲ್ ನಿವಾಸಿ ಸುಮಾರು 25 ವರ್ಷಗಳ ದಲಿತ ಯುವಕ ರಾಮಕೃಷ್ಣರವಿಗೆ ಮೊಳಹಳ್ಳಿ ನಿವಾಸಿ ಕಾಂಗ್ರೆಸ್ ಮುಖಂಡರ ಮಹೇಶ್ ಹೆಗಡೆಯವರು ಜಾತಿ ವೈಷಮ್ಯದ ಮೇಲೆ ನಿಂದನೆ ಮಾಡಿ ಬೆದರಿಕೆಯನ್ನು ಹಾಕಿ ಹಲ್ಲೆ ನಡೆಸಿ ಜಾತಿ ಮತ್ತು ಪರಿಶಿಷ್ಟ ವರ್ಗ ದೌರ್ಜನ್ಯ ಕಾಯಿದೆಯ ಅನ್ವಯ ಪೋಲೀಸ್ ಠಾಣೆಗೆ ದೂರನ್ನು ದಿನಾಂಕ :25-11-95 ರಂದು ನೀಡಿದ್ದು ಈ ದೂರು ಠಾಣೆಯಲ್ಲಿ ದಾಖಲಾಗಿದೆ ಎಂದು ದಲಿತ ರಫಿಮುಲ್ಲರವರು ಆರೋಪಿಯ ವಿರುದ್ಧ ಯಾವುದೇ ಸೂಕ್ತವಾದ ಕ್ರಮವನ್ನು ಕೈಗೊಂಡಿಲ್ಲ.

ಉಪಾಧ್ಯಕ್ಷರು : ಮಾನ್ಯ ಅಂಗಾರರವರೆ ಈಗ ಅವರು ಅರೆಸ್ಟ ಮಾಡಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಅಂಗಾರ : ಮಾನ್ಯ ಉಪಾಧ್ಯಕ್ಷರೆ, ಈಗ ಅರೆಸ್ಟ ಮಾಡಿರಬಹುದು. ಇದು ದೂರು ನೀಡಿ ಒಂದು ತಿಂಗಳು ಐದು ದಿವಸಗಳಾದ ಬಳಿಕ ಆಗಿದೆ. ದಿ: 31-12-95 ರಂದು ಮತ್ತು ಎರಡನೆ ಬಾರಿ ಕುಂದಾಪುರದ ಜಾಲಡಿಯಲ್ಲಿ ಹಾದು ಹಗಲೆ ಮೊಳಹಳ್ಳಿಯ ಮಹೇಶ್ ಹೆಗಡೆಯವರು ಮತ್ತು ಅವರ ಸಂಗಡಿಗರು ದಲಿತ ಯುವಕ ರಾಮಕೃಷ್ಣನ ಮೇಲೆ ಹಲ್ಲೆ ಮಾಡಿರತಕ್ಕಂಥದ್ದು ಮತ್ತು ಹಲ್ಲೆಗೆ ಒಳಗಾದ ಶ್ರೀರಾಮಕೃಷ್ಣರವರನ್ನು ಕುಂದಾಪುರದ ಸರ್ಕಾರಿ ಆಸ್ಪತ್ರೆಗೆ ಮಧ್ಯಾಹ್ನ 2 ಗಂಟೆಗೆ ಸೇರಿಸಲಾಯಿತು. ಅಲ್ಲೂ ಕೂಡ ವೈದ್ಯರು ಯಾವುದೇ ಚಿಕಿತ್ಸೆಯನ್ನು ನೀಡಿಲ್ಲ, ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ. ಸುಮಾರು 7 ಗಂಟೆಯಲ್ಲಿ ದಲಿತ ಯುವಕ ರಾಮಕೃಷ್ಣ ಕೊನೆಯುಸಿರೆಳೆದನು. ದಲಿತ ರಾಮಕೃಷ್ಣನು ಮೃತ ಪಟ್ಟ ವಿಷಯ ತಿಳಿದನಂತರ ಶಾಸ್ತ್ರಿವೃತ್ತದಲ್ಲಿ ಧರಣಿ ನಡೆಯುತ್ತಿತ್ತು. ಆಗ ತಿಳಿಯಿತು ಹಾಗೆ ಧರಣಿ ನಡೆಯುವಂತಹ ಚಪ್ಪರದಲ್ಲಿ ಈ ಅಪರಾಧಿ ಅವಿತುಕೊಂಡಿದ್ದರು. ಅವರು ಅವಿತುಕೊಂಡಿರುವಂತಹ ವಿಚಾರವನ್ನು ದಲಿತ ಸಂಘ ಸಮಿತಿಯವರು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ತಿಳಿಸಿದರೂ ಕೂಡ ಅವರು ಯಾವುದೇ ಕ್ರಮವನ್ನು ಸಂಬಂಧಪಟ್ಟಂತಹ ಅಪರಾಧಿಗಳನ್ನು ಬಂಧನ ಮಾಡುವಂತಹ ಕೆಲಸವನ್ನು ಮಾಡಲಿಲ್ಲ.

ಉಪಾಧ್ಯಕ್ಷರು : ಈಗ ಮಾನ್ಯ ಮಂತ್ರಿಯವರು ಬಂಧನ ಮಾಡಿದ್ದಾರೆಂದು ಹೇಳಿದ್ದಾರೆ.

ಶ್ರೀ ಎಸ್. ಅಂಗಾರ : ಮಾನ್ಯ ಉಪಾಧ್ಯಕ್ಷರೆ, ಅವರನ್ನು ಇತ್ತೀಚೆಗೆ ಅರೆಸ್ಟ ಮಾಡಿರುವಂಥಾದ್ದು.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೆ, ಅವರ ಪ್ರಶ್ನೆ ಇರುವಂಥಾದ್ದು ಈ ದೂರು ನೀಡಿ ತಿಂಗಳುಗಟ್ಟಲೆಯಾದರೂ ಕೂಡ ಇಷ್ಟು ಮಟ್ಟಿಗೆ ಇರುವಂಥಾದ್ದು ಈ ದೂರು ನೀಡಿ ತಿಂಗಳಾನುಗಟ್ಟಲೆಯಾದರೂ ಕೂಡ ಇಷ್ಟು ಮಟ್ಟಿಗೆ ನಿಷ್ಕ್ರೀಯತೆ ಏಕೆ ಬಂತು ಈ ಇಲಾಖೆಯಲ್ಲಿ, ಯಾವ ಒತ್ತಡವಿತ್ತು, ಎನ್ನುವಂತಹ ಪ್ರಶ್ನೆಯನ್ನು ನಮ್ಮ ಸ್ನೇಹಿತರು ಕೇಳುತ್ತಿದ್ದಾರೆ.

ಶ್ರೀ ಎಸ್. ಅಂಗಾರ : ಮಾನ್ಯ ಉಪಾಧ್ಯಕ್ಷರೆ, ಕೊಲೆಯಾಗಿ ಎರಡು ತಿಂಗಳಾಯಿತು. ಎರಡು

ತಿಂಗಳವರೆಗೂ ಅರೆಸ್ಟ್ ಮಾಡಲಿಲ್ಲ. ಇತ್ತೀಚೆಗೆ ಅರೆಸ್ಟ ಮಾಡಿದ್ದಾರೆ. ಇದರಲ್ಲಿ ರಾಜಕೀಯ ಹಿನ್ನೆಲೆ ಇದೆ ಮತ್ತು ಸಂಬಂಧಪಟ್ಟ ಅಧಿಕಾರಿಯ ಕೈವಾಡವಿದೆ. ಇದನ್ನು ಕೂಲಂಕುಷವಾಗಿ ತನಿಖೆ ಮಾಡಿಸಬೇಕು. ಈ ಕೊಲೆಯನ್ನು ಯಾರೇ ಮಾಡಿರಲಿ, ಅವರ ಮೇಲೆ ಕಠಿಣವಾದಂತಹ ಕ್ರಮವನ್ನು ಕೈಗೊಳ್ಳಬೇಕು. ಮತ್ತು ಸಂಬಂಧಪಟ್ಟಂತಹ ಜಿಲ್ಲಾ ಅಧಿಕಾರಿಗಳು ದಲಿತ ರಾಮಕೃಷ್ಣರವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಾರೆ. ಮತ್ತು ಅವರ ಕುಟುಂಬಗಳಿಗೆ ಉದ್ಯೋಗವನ್ನು ಕೊಡುವಂತಹ ಭರವಸೆಯನ್ನು ಕೊಟ್ಟಿದ್ದಾರೆ. ಇವೆಲ್ಲವನ್ನು ತಕ್ಷಣವೇ ನೀಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಮುಂದೆ ಇಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

+ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಉಪಾಧ್ಯಕ್ಷರೆ, ಇವತ್ತು ಸದನದಲ್ಲಿ ಮಾನ್ಯ ಗೃಹಮಂತ್ರಿಯವರು ಮೂರು ಜನರನ್ನು ಈಗಾಗಲೇ ಬಂಧನ ಮಾಡಿದ್ದಾರೆಂದು ಹೇಳಿದರು, ಬಂಧನ ಮಾಡುವುದಿಲ್ಲ, ಇದರ ಹಿನ್ನಲೆಯ ಬಗ್ಗೆ ಸರ್ಕಾರದ ಗಮನ ಸೆಳೆಯುವುದು ಅತ್ಯಂತ ಅವಶ್ಯಕವೆಂದು ಅನ್ನಿಸುತ್ತದೆ. ಮೃತ ರಾಮಕೃಷ್ಣ ಸಾಮಾಜಿಕ ನ್ಯಾಯದ ಬಗ್ಗೆ ಸಾಕಷ್ಟು ಮಾತನಾಡಿ ಹಿಂದುಳಿದ ವರ್ಗದವರ ಬಗ್ಗೆ ಸಾಕಷ್ಟು ಕಾಳಜಿ ಇತ್ತೆಂದು ಹೇಳುವಂಥಾದ್ದು ಇದೆ. ಮೃತ ರಾಮಕೃಷ್ಣನು ಅವರು ಮೃತ ಪಡುವುದಕ್ಕಿಂತ ಮುಂಚೆ 25 ದಿವಸಗಳ ಹಿಂದೆ ಅವರು ಸದರಿ ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟನು. ಇವರಿಗೆ ರಕ್ಷಣೆ ಸಿಗಲಿಲ್ಲ. ಒಂದು ತಿಂಗಳು ಐದು ದಿವಸಗಳಾದ ನಂತರ ಇವತ್ತು ಬಂಧನ ಮಾಡಿದ್ದೇವೆ ಎಂದು ಹೇಳಿದ್ದಾರೆ. ಮೃತನು ಕೊಟ್ಟ ಕೇಸ್(ಬಿ) ರಿಪೋರ್ಟ್ ಅನ್ನು ಕೇವಲ ಹತ್ತು ದಿನಗಳಲ್ಲಿ ಹಾಕುವಂತಹ ಪ್ರಯತ್ನ ಆಗಿದೆ. ಅದಕ್ಕಿಂತಲೂ ಗಮನಿಸಬೇಕಾದಂತಹ ವಿಚಾರವೆಂದರೆ ಮೃತ ರಾಮಕೃಷ್ಣರವರಿಗೆ ಎರಡು ಗಂಟೆಗೆ ಹಲ್ಲೆಯಾಗಿದೆ. ಎರಡು ಗಂಟೆಯಿಂದ ಏಳು ಗಂಟೆಯವರೆಗೆ ಸರ್ಕಾರಿ ಆಸ್ಪತ್ರೆಯಲ್ಲಿ ಡಾಕ್ಟರ್ ಚಿಕಿತ್ಸೆ ನೀಡಲಿಲ್ಲ. ಆದ್ದರಿಂದ ಈ ಡಾಕ್ಟರ್ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು. ಸರ್ಕಾರ ಏಕೆ ಕ್ರಮ ತೆಗೆದುಕೊಂಡಿಲ್ಲ ಎಂಬುದನ್ನು ನಾನು ತಮ್ಮ ಮೂಲಕ ಕೇಳುತ್ತೇನೆ. ಮೂರನೆಯದಾಗಿ ಯಾರಿಗೆ ರಕ್ಷಣೆ ಕೊಡಬೇಕಾಗಿತ್ತೋ ಅವರು ವಿಚಾರವನ್ನು ತಿಳಿಸಿದರೂ ಕೂಡ ರಕ್ಷಣೆ ಕೊಡುವಂತಹ ವ್ಯವಸ್ಥೆಯಾಗಲಿಲ್ಲ. ನಾಲ್ಕನೆಯದಾಗಿ ಅದೇ ದಿವಸ ಈ ಕೊಲೆಯಾದ ಮೇಲೆ ರಾಜಕೀಯ ಪ್ರೇರಿತವಾಗಿ ಅಪರಾಧಿಗಳು ನೇರವಾಗಿ ವಸಂತಕುಮಾರ ಶೆಟ್ಟಿಯ ಕೊಲೆಯ ಪ್ರಕರಣದಲ್ಲಿ ಒಂದು ವರ್ಷದ ಕಾಲ ಅದು ಸಿ.ಬಿ.ಐ. ಚಾರ್ಜ್ ಸೀಟ್ ಫೈಲ್ ಆದಮೇಲೂ ಕೂಡ ಸಿ.ಬಿ.ಐಗೆ ಹಸ್ತಾಂತರವಾಗಬೇಕೆಂದು ಏನು ಧರಣಿ ನಡೆಯುತ್ತಿತ್ತು. ಆಗ ಆ ಡೇರೆಯಲ್ಲಿ ಅವರು ಅವಿತುಕೊಂಡಿದ್ದರು. ಅದನ್ನು ತಿಳಿದು ಕೂಡ ಪೋಲೀಸಿನವರು ಅವರನ್ನು ಬಂಧಿಸಿಲ್ಲ. ಕೇವಲ ಮೂರು ಜನರನ್ನು ಸಾಂಕೇತಿಕವಾಗಿ ಅರೆಸ್ಟ್ ಮಾಡಿದ್ದೀರಿ. ಇನ್ನು ಇದರಲ್ಲಿ ನಾಲ್ಕೈದು,ಆರು, ಜನರು ಇದ್ದಾರೆ. ನಮಗೆ ಇದರಲ್ಲಿ ಸಂಶಯವಿದೆ. ಇದರಲ್ಲಿ ರಾಜಕೀಯ ಹಿನ್ನೆಲೆ ಇದೆ. ಇದರಲ್ಲಿ ಸಾಕಷ್ಟು ಕೈವಾಡವಿದೆ. ಈ ಕೈವಾಡವನ್ನು ಕೇವಲ ಇವರನ್ನು ಭಂದನ ಮಾಡುವ ಮೂಲಕ, ಪೋಲೀಸನವರು ಅಟೆಕ್ಷಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಈ ಕೇಸನ್ನು ಸಿ.ಓ.ಡಿ.ಗೆ ಹಸ್ತಾಂತರ ಮಾಡಬೇಕು. ಇವರಿಗೆ ರಕ್ಷಣೆ ಕೊಟ್ಟಿರುವಂತಹ ರಾಜಕಾರಣಿಗಳು ಯಾರಿದ್ದಾರೆ ಅವರನ್ನು ಪ್ರಥಮವಾಗಿ ಅರೆಸ್ಟ

ಮಾಡುವ ಮುಖಾಂತರ ಸಾಮಾಜಿಕ ನ್ಯಾಯ ಏನು ಇದೆ, ಅದನ್ನು ಒದಗಿಸಬೇಕು. ಇದರಲ್ಲಿ ದೊಡ್ಡ ಸಂಗತಿ ಏನು ಇದೆ ಎಂದರೆ ಕುಂದಾಪುರ ವ್ಯಾಪ್ತಿಯಲ್ಲಿ ಸುಮಾರು ನಾಲ್ಕೈದು ಕೊಲೆಗಳು ಆಗಿವೆ. ಎಲ್ಲೂ ಕೂಡ ಅರೆಸ್ಟ್, ಬಂಧನ ಮಾಡುವಂತಹ ಕೆಲಸವಾಗುತ್ತಿಲ್ಲ. ಇವತ್ತು ಪೋಲೀಸ್ ಠಾಣೆಗೆ ಕುಂದಾಪುರದ ಪರಿಸರದಲ್ಲಿ ಯಾರಾದರೂ ಹೋಗಬೇಕೆಂದರೆ ಆಡಳಿತ ಮಾಡುತ್ತಿರುವಂತಹ ರಾಜಕೀಯ ವ್ಯಕ್ತಿಗಳು ಕೋಲು ಹಿಡಿದುಕೊಂಡು ಹೋಗುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಇವತ್ತು ಪೋಲೀಸ್ ಠಾಣೆಗಳು ಆಡಳಿತ ಪಕ್ಷದ ಒಂದು ಕೇಂದ್ರವಾಗಿದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಇಂತಹ ನಿಗೂಢವಾದಂತಹ ಕೊಲೆ ಆಗಿ ನಂತರ ಒಂದು ತಿಂಗಳಿಗೆ ಅವರನ್ನು ಬಂಧನ ಮಾಡುವಂಥಾದ್ದು ಕೇವಲ ನಾಟಕದ ರೀತಿಯಲ್ಲಿ ಬಂಧನ ಮಾಡುವ ಮೂಲಕ ಇದನ್ನು ಮತ್ತೆ ಮುಚ್ಚಿಡುವಂತಹ ಪ್ರಯತ್ನ ಆಗುತ್ತಿದೆ. ಇದರಿಂದ ಪೋಲೀಸರ ಮೇಲೆ ನಂಬಿಕೆ ಇಲ್ಲ. ಇದಕ್ಕೆ ರಾಜ್ಯ ಸಿ.ಓ.ಡಿ.ಯವರ ಮುಖಾಂತರ ತನಿಖೆ ಮಾಡಿಸಿದರೆ ಸತ್ಯಾಂಶ ಹೊರಬರುತ್ತದೆ. ಇದರಲ್ಲ ಕೊಲೆ ಮಾಡುವುದು ದೊಡ್ಡ ಸಂಗತಿಯಲ್ಲಿ, ಕೊಲೆ ಮಾಡಿಸುವವರು ಇದ್ದಾರಲ್ಲಾ, ಇವರು ನಿಜವಾದಂತಹ ಅಪರಾಧಿಗಳಾಗಿದ್ದಾರೆ. ಇವರನ್ನು ಕಂಡು ಹಿಡಿಯಬೇಕು. ಡಾಕ್ಟರ್ ಚಿಕಿತ್ಸೆ ಏಕೆ ಕೊಡಲಿಲ್ಲವೆಂಬುದು ಇದಕ್ಕೆ ರಾಜಕೀಯ ಒತ್ತಡವಿದೆ ಎಂಬುದು ನಮಗೆ ತಿಳಿದುಬಂದಿದೆ. ಅವರಿಗೆ ಐದು ಗಂಟೆಗಳ ಕಾಲ ಮೆಡಿಸನ್ ಸಿಗದೆ ಇರುವುದಕ್ಕೆ ರಾಜಕೀಯ ಒತ್ತಡವಿದ್ದಕಾರಣ ಸಿಕ್ಕಿಲ್ಲ.

4.10 ಪಿ.ಎಂ.

ಈ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿ ಸಿ.ಓ.ಡಿಯಲ್ಲಿ ತನಿಖೆಯಾದರೆ ಮಾತ್ರ ಇದರ ಹಿಂದೆ ಯಾರಿದ್ದಾರೆ ಎನ್ನುವುದು ಕೂಲಂಕುಷವಾಗಿ ತಿಳಿಯುತ್ತದೆ. ಇದರ ಬಗ್ಗೆ ಆದಷ್ಟು ಶೀಘ್ರ ಸಿ.ಓ.ಡಿ. ತನಿಖೆ ಮಾಡಿಸಬೇಕೆಂದು ಹೇಳುತ್ತಿದ್ದೇನೆ. ಈ ಸಾಮಾಜಿಕ ನ್ಯಾಯದ ಬಗ್ಗೆ ಇನ್ನು ಮುಂದಾದರೂ ಒಂದು ಪ್ರಾಮಾಣಿಕತೆ ಈ ಸರ್ಕಾರಕ್ಕೆ ಇದ್ದರೆ, ಯಾವುದಾದರೂ ಆ ಒಂದು ಹಿಂದುಳಿದ ಜನಾಂಗದ ಜನಕ್ಕೆ ಒಂದು ರಕ್ಷಣೆಯನ್ನು ಕೊಡಬೇಕೆಂದು ಕೇಳಿದರೆ, ಅವರಿಗೆ ಪ್ರಾಮಾಣಿಕದ ದಬ್ಬಾಳಿಕೆ ಮಾಡಬಾರದೆನ್ನುವುದನ್ನು ಕೂಡ ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳುತ್ತಿದ್ದೇನೆ, ಈ ಪ್ರಕರಣದಲ್ಲಿ ಸಿ.ಓ.ಡಿ. ತನಿಖೆ ಆಗಲೇ ಬೇಕು ಎನ್ನುವಂಥ ಅಗ್ರಹವನ್ನು ಕೂಡ ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ (ಅನೇಕಲ್) : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನನಗೆ ಕೆಲವು ಪತ್ರಗಳು ಬಂದಿವೆ, ಅವನ್ನು ಗೃಹ ಸಚಿವರಿಗೆ ಕಳುಹಿಸಿಕೊಡುತ್ತೇನೆ ಅಷ್ಟೆ. ಏನು ಘಟನೆ ನಡೆಯಿತು ಅದರ ಬಗ್ಗೆ ವಿಶ್ಲೇಷಣೆ ಬಂದಿದೆ, ಅದನ್ನು ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಆಮೇಲೆ ದಲಿತ ಸಂಘರ್ಷ ಸಮಿತಿಯಿಂದ ಇದನ್ನು ಪ್ರತಿಭಟಿಸಿ ಅವರು ಮೆರವಣಿಗೆ ಹೊರಟಿದ್ದಾರೆ. ಇದರಲ್ಲಿ ಯಾರು ಅಪರಾಧಿಗಳು? ಅಪರಾಧಿಗಳಿಗೆ ರಕ್ಷಣೆಯನ್ನು ಕೊಟ್ಟವರು ಯಾರು? ಯಾವ ರೀತಿ ರಕ್ಷಣೆ ಕೊಟ್ಟರು? ವಿಶದವಾಗಿ ಕಾಗದವನ್ನು ಬರೆದಿದ್ದಾರೆ, ಅದನ್ನೂ ತಮ್ಮ (ಗೃಹ ಸಚಿವರು) ಹತ್ತಿರ ಕಳುಹಿಸಿಕೊಡುತ್ತೇನೆ. ಜೊತೆಗೆ ಮೃತಪಟ್ಟು ರಾಮಕೃಷ್ಣ ಏನಿದ್ದಾನೆ ಅವನು ದಲಿತ ಜನಾಂಗದವನು.

ಆಪನಿಗೆ ಕೇವಲ 25 ವರ್ಷ ವಯಸ್ಸು ಕೊಲೆಗೆ ಕಾರಣ ಏನೇ ಆಗಿರಲಿ. ಆತ ಸತ್ತ ಮೇಲೆ ಅವರಿಗೆ ಏನಾದರೂ ಪರಿಹಾರ ಕೊಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ? ಕೊಟ್ಟಿದ್ದರೆ ಅವನಿಗೆ...

ಉಪಾಧ್ಯಕ್ಷರು : ಅವರು ಉತ್ತರ ಹೇಳಲಿ, ಆಮೇಲೆ ಬೇಕಾದರೆ ಕೇಳಿ.

ಶ್ರೀ ವೈ. ರಾಮಕೃಷ್ಣ : ಅದಕ್ಕೆ ಈ ಎಲ್ಲಾ ವಿಷಯಗಳು ಕೂಡಿದ ಪತ್ರಗಳನ್ನು ಇಲ್ಲಿ ಅಳವಡಿಸಿದ್ದೇನೆ, ಅದನ್ನು ನಾನು ಕಳುಹಿಸಿಕೊಡುತ್ತಿದ್ದೇನೆ. ಸ್ವಾಮಿ ಇದರ ಜೊತೆಗೆ ಅಲ್ಲಿ ಈಗ ಕಳೆದ ತಿಂಗಳು ಅದೇ ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಯಲ್ಲಾಪುರದಲ್ಲಿ ಶ್ರೀಮತಿ ರಾಜಮ್ಮ ಎನ್ನುವವಳು, ಅವಳು ಕೂಡ ಸತ್ತಳು. ತಾವು ಇದರ ಬಗ್ಗೆ ಕ್ರಮ ತೆಗೆದುಕೊಂಡು ಸಿ.ಬಿ.ಐ.ಗೆ ಒಪ್ಪುತ್ತೇನೆಂದು ಹೇಳಿದಿರಿ. ಅವಳು ಕೂಡ ಪರಿಶಿಷ್ಟ ಜಾತಿಗೆ ಸೇರಿದವಳೇ ಅದರ ಬಗ್ಗೆಯೂ ಕೂಡ ಏನು ಕ್ರಮ ತೆಗೆದುಕೊಳ್ಳಲಿಲ್ಲ. ಹಾಗೆ ರಾಜರಾಂ ವಿಚಾರ ತಮಗೆ ಗೊತ್ತಿದೆ. ಹೀಗೆ ಅನೇಕ ಕೊಲೆಗಳು ಮಧ್ಯೆ ಮಧ್ಯೆ ನಡೆಯುತ್ತಿದ್ದಾವೆ. ಮೊದಲೇ ನಾನು ಕೇಳಿದ್ದಕ್ಕೆ ಉತ್ತರವಾಗಿ ಇಲ್ಲಿ ಮಂತ್ರಿಗಳಾದ ಸನ್ಮಾನ್ಯ ಸಿಂಧ್ಯಾರವರು ಹೇಳಿದರು. ಕೋಲಾರ ಜಿಲ್ಲೆಯಲ್ಲಿ ಒಂದು ವರ್ಷದಲ್ಲಿ ಐವತ್ತ ಕೊಲೆಗಳಾಗಿವೆ ಎಂದು ಉತ್ತರದಲ್ಲಿ ಹೇಳಿದ್ದರು. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹರಿಜನರ ಮೇಲೆ ಹೆಚ್ಚಿನ ದೌರ್ಜನ್ಯ, ಕೊಲೆ ಹೆಚ್ಚಾಗಿ ನಡೆಯುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಏನಾದರೂ ದೊಡ್ಡ ಮನಸ್ಸು ಮಾಡಿ, ಡೊಪ್ಯೂಟಿ ಕಮಿಷನರಗಳನ್ನಾಗಲಿ, ಡಿಎಸ್‌ಪಿ ಗಳನ್ನಾಗಲಿ ವೈಯಕ್ತಿಕವಾಗಿ ಜವಾಬ್ದಾರರೆಂದು ನೀವು ಮಾಡದಿದ್ದರೆ ಈ ಒಂದು ಕಾರ್ಯ ಮುಂದುವರೆಯುತ್ತದೆ. ಬಹುಶಃ ಬಡವರನ್ನು, ಹರಿಜನರಗಿರಿಜನರನ್ನು ಯಾರು ಕೇಳತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕೆಂದು ಕೇಳಿಕೊಂಡು ಈ ಎಲ್ಲಾ ಕಾಗದಗಳನ್ನು ಸನ್ಮಾನ್ಯ ಶ್ರೀ ಗೃಹಮಂತ್ರಿಗಳ ಬಳಿಗೆ ನಾನು ಕಳಿಹಿಸಿಕೊಡುತ್ತಿದ್ದೇನೆ. ದಯವಿಟ್ಟು ಈ ವಿಚಾರವನ್ನು ತಾವು ಕೂಲಂಕುಷವಾಗಿ ನೋಡಿ, ಯಾರ ಯಾರ ಹೆಸರು ಇದರಲ್ಲಿದೆ, ಅವರ ಬಗ್ಗೆ ವಿಚಾರಣೆಯನ್ನು ನೆಡೆಸಿ ಅವರ ಮೇಲೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಬೇಡಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು : ಅವರು (ಗೃಹಮಂತ್ರಿಗಳು) ಉತ್ತರ ಹೇಳಲಿ.

ಶ್ರೀ ಕುಂಬಳೇ ಸುಂದರ್ ರಾವ್ : ನಾನೂ ಸಹಿ ಮಾಡಿದ್ದೇನೆ.

ಉಪಾಧ್ಯಕ್ಷರು : ಅಲ್ಲ, ನೀವು ನಲ್ವತ್ತು ಮಂದಿಯ ಸಹಿ ಮಾಡಿದ್ದೇನೆಂದು ಮಾತನಾಡುತ್ತೇವೆಂದರೆ ಹೇಗೆ ಅವಕಾಶ ಕೊಡುವುದಕ್ಕಾಗುತ್ತದೆ. ವಿಷಯ ಗಾಂಭೀರ್ಯತೆ ಏನಿದೆ ಎಂದು ಅರ್ಥ ಮಾಡಿಕೊಳ್ಳಲಾಗಿದೆ.

ಶ್ರೀ ಎನ್. ಯೋಗೇಶ್ ಭಟ್ : ಸನ್ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವ ಮುಂಚೆ ಅಲ್ಲಿ ರಫಿಕ್ ಮುಲ್ಲಾ ಎಂಬ ಪೋಲಿಸ್ ಅಧಿಕಾರಿ ಯಾರಿದ್ದರು, ಅವರು ಇರುವಾಗಲೇ ಸುಮಾರು ನಾಲ್ಕೈದು ಕೊಲೆಗಳು ಕುಂದಾಪುರ ತಾಲ್ಲೂಕಿನಲ್ಲಿ ನೆಡೆದಿದೆ. ಈ ಅಧಿಕಾರಿಗೂ ಈ ಕೊಲೆಗಳಿಗೂ ಏನಾದರೂ ಸಂಬಂಧವಿದೆಯೇ? ಇದರ ಬಗ್ಗೆಯು ಕೂಡ

ತನಿಖೆಯನ್ನು ನಡೆಸಬೇಕು. ಇತ್ತೀಚೆಗೆ ಆ ಅಧಿಕಾರಿಯನ್ನು ಸಿ.ಓ.ಡಿ.ಗೆ ವರ್ಗಾವಣೆ ಮಾಡಿಕೊಂಡು ಅಮಾನತ್ತು ಮಾಡಿದ ಮಾಹಿತಿಯು ಕೂಡ ತಮಗೆ ಬಂದಿದೆ. ಇಂತಹ ಒಬ್ಬ ಅಧಿಕಾರಿ ಇದ್ದಿದ್ದರಿಂದ ಇಂತಹ ಸಮಸ್ಯೆಗಳು ಉದ್ಭವವಾಗಿದೆಯೇ? ಇದರ ಬಗ್ಗೆಯೂ ಕೂಡ ಸನ್ಮಾನ್ಯ ಗೃಹಮಂತ್ರಿಗಳು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

(ಈ ಸಂದರ್ಭದಲ್ಲಿ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

+ಶ್ರೀ ಕುಂಬಳೇ ಸುಂಧರರಾವ್ (ಸೂರತ್ಕಲ್) : ಸನ್ಮಾನ್ಯ ಅಧ್ಯಕ್ಷರೆ, ಕುಂದಾಪುರ ತಾಲ್ಲೂಕಿನ ರಾಮಕೃಷ್ಣ ಎಂಬ ದಲಿತ ಯುವಕನ ಕೊಲೆಯ ಹಿಂದೆ ಒಂದು ವ್ಯವಸ್ಥಿತವಾದ ಒಂದು ಜಾಲವಿದೆ ಎಂದು ನಮಗನಿಸುತ್ತದೆ. ಒಬ್ಬ ವ್ಯಕ್ತಿಯನ್ನು ಜಾತಿಯಿಂದಲೇ ಅವಮಾನ ಮಾಡಿದರೆ ಅಂತಹವನನ್ನೇ ಪೋಲಿಸನವರು ದಸ್ತಿಗಿರಿ ಮಾಡುತ್ತಾರೆ. ಅವನ ಮೇಲೆ ಕೇಸ್ ಹಾಕುತ್ತಾರೆ. ಈ ರೀತಿ ಜಾತಿಯಿಂದ ಮಾಡಿದ್ದು ಮಾತ್ರವಲ್ಲ, ನನ್ನ ಮೈ ಮೇಲೆ ಹಲ್ಲೆ ಮಾಡಿದ್ದಾರೆಂದು ಆತ ಸಾಯುವುದಕ್ಕೆ ಒಂದು ತಿಂಗಳ ಮೊದಲೇ ಕೋಟಾ ಪೋಲಿಸ್ ಸ್ಟೇಷನನಲ್ಲಿ ದೂರು ಕೊಟ್ಟಿದ್ದಾನೆ. ಪೋಲೀಸಿನವರು ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಜಾತಿಯಿಂದಲೇ ಇಂತಹ ಅಪರಾಧವನ್ನು ಮಾಡಿದ್ದರೂ ಸಹ, ಆ ವಿಷಯ ಪೋಲಿಸಿನವರ ಗಮನಕ್ಕೆ ಬರುವುದಿಲ್ಲ. ಹಲ್ಲೆ ಮಾಡಿದ್ದಾರೆ ನನಗೆ ಅಪಾಯವಿದೆ ಎಂದು ದೂರನ್ನು ಕೊಟ್ಟರೂ ಸಹ ಅದರ ಬಗ್ಗೆ ಪೋಲಿಸರು ಕ್ರಮ ಕೈಗೊಳ್ಳುವುದಿಲ್ಲವೆಂದಾದರೆ ಪೋಲೀಸರ ಉದ್ದೇಶವೇನು? ಈ ರಾಮಕೃಷ್ಣ ಕೊಲೆ ಏನಾಯಿತು, ಈ ಕೊಲೆಯನ್ನು ಪೋಲೀಸರೇ ವಿಷ್ಯಿಯತೆಯಿಂದ ಮಾಡಿಸಿದರು ಎಂದು ನಾವು ಆರೋಪ ಮಾಡಿದರೆ ತಪ್ಪಲ್ಲವೆಂದು ನಾನು ಗ್ರಹಿಸುತ್ತೇನೆ. ದೂರು ಕೊಟ್ಟಾಗ ವಿಚಾರಣೆ ಮಾಡದೆ, ಅವನನ್ನು ಅವನಷ್ಟಕ್ಕೆ ಬಿಟ್ಟರೆ, ಅವನಿಗೆ ದೊಡ್ಡ ಮನುಷ್ಯರ ವಿರೋಧ ಸಂಗ್ರಹವಾದರೆ, ಆ ವಿರೋಧ ಪರಿಣಾಮ ಹೀಗಾಗದೆ ಮತ್ತೆ ಹೇಗಾಗುವುದಕ್ಕೆ ಸಾಧ್ಯ? ಇಷ್ಟು ಮಾತ್ರವಲ್ಲ, ಅವನಿಗೆ ಸರಿಯಾದಂಥ ಟ್ರೀಟ್‌ಮೆಂಟ್ ದೊರೆಯದೇ ಐದು ಗಂಟೆಗಳ ಕಾಲ ಕುಂದಾಪುರ ಆಸ್ಪತ್ರೆಯಲ್ಲಿ ಬಿದ್ದು ಕೊಳೆಯುತ್ತಿದ್ದ. ಆಸ್ಪತ್ರೆಯಲ್ಲಿ ಸರಿಯಾದ ಚಿಕಿತ್ಸೆ ಇಲ್ಲದಿದ್ದರೆ ಇವರು ಮಂಗಳೂರಿಗೆ ಕಳುಹಿಸುವ ವ್ಯವಸ್ಥೆಯನ್ನಾದರೂ ಮಾಡಬೇಕಾಗಿತ್ತು. ಅವನ ಪ್ರಾಣ ಹೋಗುವವರೆಗೆ ಡಾಕ್ಟರಗಳು ಮೂಕಪ್ರೇಕ್ಷರಾಗಿರುತ್ತಾರೆಂದರೆ ಆಸ್ಪತ್ರೆ ಇರುವುದಾದರೂ ಎತಕ್ಕೆ? ಪ್ರಾಣಾಂತಿಕವಾದಂಥ ಒಂದು ಸ್ಥಿತಿ ಇದ್ದರೆ,ತಮ್ಮಲ್ಲಿ ಸೌಕರ್ಯ ಆಸ್ಪತ್ರೆವಿಲ್ಲವೆಂತಾದರೆ ಇನ್ನೊಂದು ಕಡೆಗೆ ಸಾಗಿಸುವ ವ್ಯವಸ್ಥೆಯನ್ನು ಮಾಡುವುದನ್ನು ಬಿಟ್ಟು ಒಬ್ಬ ಗಾಯಾಳುವನ್ನು ಕೊಲ್ಲುವಂಥ ಕೆಲಸವನ್ನು ಆಸ್ಪತ್ರೆ ಮಾಡುತ್ತಿದೆ ಎಂದಾದರೆ ಡಾಕ್ಟರರ ನಿಷ್ಠೆಯತೆಂದು ಹಿಂದೆ ಯಾರ ಪ್ರಚೋದನೆ ಇದೆ? ಏತಕ್ಕೆ ಅವರು ಸುಮ್ಮನೆ ಕುಳಿತರು? ಇದರ ಬಗ್ಗೆ ವಿಚಾರಣೆಯಾಗಬೇಕಾಗುತ್ತದೆ. ಹಲ್ಲೆಗೊಳಗಾಗಿ ಇವರು ಈ ಆಸ್ಪತ್ರೆಯಲ್ಲಿ ಸತ್ತುಹೋದರು ಎಂದು ಸುದ್ದಿ ಹರಡಿದ ಮೇಲೆ ಯಾರು ದುಸ್ಕರ್ಮಿಗಳಿದ್ದಾರೆ, ಅವರು ಸತ್ಯಾಗ್ರಹ ನಡೆಯುತ್ತಿರುವಂಥ ಚಪ್ಪರದೊಳಗೆ ಹೋಗುತ್ತಾರೆ. ಚಪ್ಪರದಲ್ಲಿದ್ದಂತಹ ವ್ಯಕ್ತಿಗಳು ಪ್ರಾಮಾಣಿಕರಾಗಿದ್ದಿದ್ದರೆ ಅವರ ಕುತ್ತಿಗೆಗೆ ಕೈ ಹಾಕಿ ಹೊರಗೆ ದಬ್ಬಬೇಕಾಗಿತ್ತು, ಪೋಲೀಸನವರಿಗೆ ಹಿಡಿದುಕೊಡಬೇಕಾಗಿತ್ತು. ಅದನ್ನು ಅವರು ಮಾಡಲಿಲ್ಲವೆಂತಾದರೆ ಅವರದೂ ಇದರಲ್ಲಿ ಏನಾದರೂ

ಕುಮ್ಮಕ್ಕು ಇದೆ ಎಂದು ನಾವು ಯೋಚಿಸುವಂಥ ಸ್ಥಿತಿ ಬರುತ್ತದೆ. ಇಷ್ಟೆಲ್ಲಾ ಆದಮೇಲೆ, ಕೊನೆಯದಾಗಿ ನಾನು ಹೇಳುತ್ತಿದ್ದೇನೆ, ಒಬ್ಬ ದಲಿತ ಯುವಕ ಸತ್ತಾಗ ಅವನಿಗೆ ಪರಿಹಾರವೆಂದು ಆವನ ಕುಟುಂಬದ ರಕ್ಷಣೆಗೆ ಏನಾದರೂ ಕೊಡುವಂತಹ ಪದ್ದತಿ ಏನಿದೆಯೋ ಅದು ಆಶ್ವಾಸನೆಯಲ್ಲಿ ಮಾತ್ರ ಉಳಿದಿದೆ ಇನ್ನೂ ಏನೂ ಆಗಿಲ್ಲ. ನಮ್ಮ ಸರ್ಕಾರಕ್ಕೆ, ಈ ಆಪತ್ತಿಗೆ ಸಿಕ್ಕಿ ಪ್ರಾಣಹೋದವರಿಗೆ, ಗಾಯಾಳುಗಳಾದವರಿಗೆ ಪರಿಹಾರ ಕೊಡುತ್ತೇವೆಂದು ಹೇಳುವಂಥ ಅಭ್ಯಾಸವಿದೆ, ಕೊಡುವಂಥ ಅಭ್ಯಾಸವಿಲ್ಲ. ನನ್ನ ಕ್ಷೇತ್ರದ ಎಂ.ಆರ್.ಪಿ.ಎಲ್. ನಲ್ಲಿ ಇದೇ ನಡೆಯಿತು. ಗುಂಡೇಟು ಆಗಿರತಕ್ಕಂಥ ಯುವಕರಿಗೆ ಇದುವರೆವಿಗೆ ಎರಡೂವರೆ ಸಾವಿರ ರೂಪಾಯಿಗಳನ್ನು ಪರಿಹಾರ ಕೊಡಲಾಗಿದೆ, ಇಲ್ಲಿ ಅಷ್ಟೂ ಕೊಡಲಾಗಿಲ್ಲ.

ಅಧ್ಯಕ್ಷರು : ಕುಂಬಳೇ ಸುಂಧರರಾವರವರೆ, ಒಂದು ನಿಮಿಷ ಕುಳಿತುಕೊಳ್ಳಿ. ಈ ಗಮನ ಸೆಳೆಯುವ ಸೂಚನೆಯಲ್ಲಿ ನಮ್ಮ ಸದನದ ಪದ್ಧತಿ ಏನೆಂದರೆ, ತಾವು ಗಮನ ಸೆಳೆಯುತ್ತೀರಿ ಸರ್ಕಾರದ ಪರವಾಗಿ ಆ ಇಲಾಖೆಗೆ ಸಂಬಂಧಿಸಿದ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತಾರೆ. ನೀವು ಯಾವ ವಿಚಾರಕ್ಕೆ ಗಮನ ಸೆಳೆದಿರುತ್ತೀರಿ ಮತ್ತು ಅವರು ಹೇಳಿಕೆ ಕೊಟ್ಟಿರುತ್ತಾರೆ, ಆ ಹೇಳಿಕೆಯಲ್ಲಿ ಯಾವ ನ್ಯೂನತೆಗಳಿರುತ್ತವೆ ಅದನ್ನು ಮಾತ್ರ ತಾವು ಪ್ರಸ್ತಾಪ ಮಾಡಿ ಮಾತನಾಡಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ನಮ್ಮ ಗೃಹ ಸಚಿವರು ಬಹಳ ಬುದ್ಧಿವಂತರಿದ್ದಾರೆ. ತಾವು ಕೇಳಿ, ಒಂದೇ ಸಾಲಿನಲ್ಲಿ ಏಳು ಜನರನ್ನು ಬಂಧನ ಮಾಡಿದ್ದೇವೆ, ಆ ವಿಷಯದಲ್ಲಿ ತಮಗೆ ಬೇಕಾದ್ದನ್ನು ಕೇಳಿರಿ ಎಂದರು, ಅದಕ್ಕೆ ಅವರು ಕೇಳುವುದಕ್ಕೆ ಶುರು ಮಾಡಿದ್ದಾರೆ.

ಅಧ್ಯಕ್ಷರು : ಆದರೆ ಸಭೆಯನ್ನು ಗೃಹಮಂತ್ರಿಗಳು ನಡೆಸುವುದಿಲ್ಲವಲ್ಲಾ, ನಾನು ನಡೆಸಬೇಕಲ್ಲ. ಗೃಹಮಂತ್ರಿಗಳು ಗೃಹ ಇಲಾಖೆಯನ್ನು ನಡೆಸಲಿ ನನ್ನದೇನು ಆಕ್ಷೇಪಣೆ ಇಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ : ಅಧ್ಯಕ್ಷರೆ, ಏಕೆಂದರೆ ಅದು ಪ್ರಾಮುಖ್ಯವಾದ ವಿಚಾರವಾಗಿದೆ...

ಅಧ್ಯಕ್ಷರು : ಸದಾನಂದಗೌಡರೆ, ಒಂದು ನಿಮಿಷ ಕುಳಿತುಕೊಳ್ಳಿ. ನನ್ನ ಸಮಸ್ಯೆ ಏನೆಂದರೆ ತಾವು ವಕೀಲರು, ನಮ್ಮಲ್ಲಿ ಹೊಸ ಹೊಸ ಸಂಪ್ರದಾಯಗಳನ್ನು ನಾನು ಹಾಕಿ ಕೊಟ್ಟರೆ ಬೇರೆಯವರು ಏನು ತಿಳಿದುಕೊಳ್ಳುತ್ತಾರೆಂದರೆ, ನನಗೇ ರೂಲ್ಸ ಗೊತ್ತಿಲ್ಲವೆಂದು ತಿಳಿದುಕೊಂಡು ನನ್ನ ಬಗ್ಗೆ ಅನುಮಾನ ಪಡುತ್ತಾರೆ. ಗಮನ ಸೆಳೆಯುವ ವಿಚಾರದಲ್ಲಿ ತಾವು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಮೇಲೆ ಅದನ್ನು ಸರ್ಕಾರಕ್ಕೆ ತಲುಪಿಸಿ ಸಂಬಂಧಿಸಿದ ಇಲಾಖೆಯವರು ಮಾಹಿತಿಗಳನ್ನು ತರಿಸಿಕೊಂಡು ತಮಗೆ ಒಂದು ಹೇಳಿಕೆಯನ್ನು ಕೊಡುತ್ತಾರೆ. ಅದರಲ್ಲಿ ಏನು ನ್ಯೂನ್ಯತೆಗಳಿರುತ್ತದೆ, ನಿಮ್ಮದು ಏನು ಆಕ್ಷೇಪಣೆ ಇರುತ್ತದೆ, ಅದಕ್ಕೆ ಸಂಬಂಧಿಸಿದಂತೆ ಆ ಕ್ಲಾರಿಫಿಕೇಷನ್ನ ಕೇಳುವುದಕ್ಕೆ ಮಾತ್ರ ಅವಕಾಶವಿರುತ್ತದೆ. ಕುಂಬಳೇ ಸುಂಧರರಾವರವರು ಏನಾದರೂ ಹೇಳುವುದಿದ್ದರೆ ಒಂದು ನಿಮಿಷದಲ್ಲಿ ಮುಗಿಸಲಿ.

ಶ್ರೀ ಕುಂಬಳೇ ಸುಂಧರರಾವ್ : ಸನ್ಮಾನ್ಯ ಅಧ್ಯಕ್ಷರೆ ನನ್ನ ಮಾತನ್ನು ಮುಗಿಸುವ ಮೊದಲು ಇಷ್ಟನ್ನು ಮಾತ್ರ ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಈ ಪರಿಹಾರ ಕೊಡುವುದೆಂದು ಸರ್ಕಾರ ಏನು ಘೋಷಣೆ ಮಾಡುತ್ತದೆ, ಅವರು ಉಸ್ತುವಾರಿ ಮಂತ್ರಿಗಳಿರಬಹುದು ಜಿಲ್ಲಾಧಿಕಾರಿಗಳಿರಬಹುದು,

ಅದು ಬರೀ ಘೋಷಣೆ ಘೋಷಣೆಯಾಗಿ ಉಳಿಯದೆ ಆ ಸಂಸಾರದ ಘೋಷಣೆಗೆ ಅನುಕೂಲವಾಗುವಂಥ ರೀತಿಯಲ್ಲಿ ಸಹಾಯ ಸರ್ಕಾರದಿಂದ ಒದಗಿ ಬರಲಿ, ಆ ಘೋಷಣೆ ಸತ್ಯವಾಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು : ಒಂದು ನಿಮಿಷ, ಪೂಜಾರಿಯವರು ಅಪರೂಪಕ್ಕೆ ಅವಕಾಶ ಕೇಳುತ್ತಾರೆ. ಅವರು ನಿಮ್ಮ ವಿಪ ಅಲ್ಲವೇ, ಅವರು ಮಾತನಾಡಲಿ. ಅನಂತರ ತಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಎಂ. ರುಕ್ಮಯ್ಯ ಪೂಜಾರಿ : ಸನ್ಮಾನ್ಯ ಅಧ್ಯಕ್ಷರೇ, ಈ ಸರ್ಕಾರದ ಪ್ರತಿ ಸೆಲ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತಿದೆ. ಈಗ ಈ ದಲಿತ ಯುವಕ ರಾಮಕೃಷ್ಣ ಅವನು ಕೊಲೆಯಾಗುವ ಒಂದು ತಿಂಗಳ ಮೊದಲೇ ಅವನ ಮೇಲೆ ಹಲ್ಲೆಯಾಗಿದೆ. ಇದರ ಬಗ್ಗೆ ಪೋಲೀಸ್ ಇಲಾಖೆಗೆ ಅವರು ಕಂಪ್ಲೆಂಟ್ ಕೊಟ್ಟಿದ್ದಾರೆ. ಆದರೆ ಒಂದು ತಿಂಗಳು ಆದರೂ ಕೂಡ ಅದರ ಬಗ್ಗೆ ಏನೂ ಆಕ್ಷನ್ ತೆಗೆದುಕೊಳ್ಳಲಿಲ್ಲ. ಕಂಪ್ಲೆಂಟ್ ಕೊಟ್ಟವರ ಮೇಲೆ ಏನೂ ಕೂಡ ಆಕ್ಷನ್ ತೆಗೆದುಕೊಳ್ಳಲಿಲ್ಲ. ಒಂದು ವೇಳೆ ಏನಾದರೂ ಅವತ್ತೇ ಆಕ್ಷನ್ ತೆಗೆದುಕೊಂಡಿದ್ದರೆ ಬಹುಶಃ ಇವತ್ತು ರಾಮಕೃಷ್ಣ ಬದುಕಿರುತ್ತಿದ್ದ. ಇಂಥ ಪರಿಸ್ಥಿತಿಯಲ್ಲಿ ಅಲ್ಲಿ ಇದ್ದಂಥ ಪೋಲೀಸ್ ಅಧಿಕಾರಿ, ರಫೀಮುಲ್ಲಾ ಇದ್ದಾನೆ, ಅವನು ಕಾಲದಲ್ಲಿ ಕುಂದಾಪುರದಲ್ಲಿ ಐದಾರು ಕೊಲೆಯಾಗಿದೆ. ರಫೀಮುಲ್ಲಾನಿಗೆ ಇವತ್ತು ಕುಂದಾಪುರದಲ್ಲಿ ನಡೆದಂಥ ಎಲ್ಲಾ ಕೊಲೆಗಳಿಗೂ ಕೂಡ ಹತ್ತಿರದ ಸಂಬಂಧ ಇದೆ. ಈ ಸಂಬಂಧದಲ್ಲಿ ಈ ಬಂದು ಕೊಲೆ ಕೂಡ ರಫೀಮುಲ್ಲನ ಕೈವಾಡದ ಕಾರಣದಿಂದಾಗಿ ಕೊಲೆಯಾಗಿದೆ. ಈ ದೃಷ್ಟಿಯಿಂದ ರಫೀಮುಲ್ಲನ ಕೈವಾಡದ ಕಾರಣದಿಂದಾಗಿ ಕೊಲೆಯಾಗಿದೆ. ಈ ದೃಷ್ಟಿಯಿಂದ ರಫಿಮುಲ್ಲಾನ ಮೇಲೆ ತಕ್ಷಣ ಡಿಸಮಿಸ್ ಮಾಡತಕ್ಕಂಥ ಒಂದು ಕಾರ್ಯಕ್ರಮ ಕೂಡ ಸರ್ಕಾರ ಹಾಕಬೇಕಾಗಿದೆ. ಅದು ಮಾತ್ರವಲ್ಲ. ಅವನ ಮೇಲೆ ಹಲ್ಲೆಯಾಗಿ, ಅವನು ಆಸ್ಪತ್ರೆಗೆ ಅಡ್ಮಿಟ್ ಆದ ನಂತರ 2 ಗಂಟೆಯಿಂದ 7 ಗಂಟೆಯವರೆಗೆ ಕೂಡ ಏನು ಚಿಕಿತ್ಸೆ ಮಾಡಿಲ್ಲ ಅವನಿಗೆ. ಬಹುಶಃ ಅಲ್ಲಿದ್ದಂಥ ಡಾಕ್ಟರು ರಾಮಕೃಷ್ಣನಿಗೆ ಸರಿಯಾದ ಔಷಧ ಕೊಟ್ಟಿದ್ದರೆ ಆತ ಬದುಕಲಿಕ್ಕೆ ಅವಕಾಶ ಇತ್ತು. ರಫೀಮುಲ್ಲಾ ಮತ್ತು ಡಾಕ್ಟರ್ ಈ ಇಬ್ಬರೂ ಕೂಡ ಇದರಲ್ಲಿ ಶಾಮೀಲಾದ ಕಾರಣ ಬಹುಶಃ ಈ ರಾಮಕೃಷ್ಣ ಸಾಯಲಿಕ್ಕೆ ಕಾರಣವಾಗಿದೆ. ಆ ದೃಷ್ಟಿಯಿಂದ ಇಬ್ಬರ ಬಗ್ಗೆ ಕೂಡ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಆದ್ದರಿಂದ ಈ ಇಬ್ಬರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಐ. ಎಂ. ಜಯರಾಮಶೆಟ್ಟಿ : ಮಾನ್ಯ ಸಭಾಧ್ಯಕ್ಷರೇ, ನಮ್ಮ ಕುಂದಾಪುರ ತಾಲ್ಲೂಕಿನಲ್ಲಿ ಒಂದು ಸಮಸ್ಯೆಯಾಗಿದೆ, ಈ ಕೊಲೆ ಎನ್ನುವ ಪ್ರಕರಣ ಸತತವಾಗಿ ನಡೆಯುತ್ತಿರುತ್ತದೆ. ಇದಕ್ಕೆ ಮುಖ್ಯವಾಗಿ ಕಾರಣ ಏನೆಂದರೆ ಯಾರು ಈ ಕೊಲೆಯ ಹಿಂದುಗಡೆ ಇದ್ದಾರೆ ಏನ್ನುವುದನ್ನು ಇವತ್ತು ನಮ್ಮ ಸರ್ಕಾರ ಮತ್ತೆ ಹೆಚ್ಚುವುದರಲ್ಲಿ ಬಹಳ ವಿಫಲವಾಗಿರುತ್ತದೆ.

ಅಧ್ಯಕ್ಷರು : ನಿಮಗೆ ಗೊತ್ತಿದ್ದರೆ ನೀವು ಹೇಳಿ.

ಶ್ರೀ ಐ.ಎಂ. ಜಯರಾಮಶೆಟ್ಟಿ : ಮುಖ್ಯವಾಗಿ ನಾನು ಈ ಕೊಲೆಯ ಹಿನ್ನೆಲೆಯಲ್ಲಿ ಹೇಳುತ್ತೇನೆ, ರಿಪೋರ್ಟ್ ಪ್ರಕಾರವೇ ವೈದ್ಯಾಧಿಕಾರಿಗಳು ಇದನ್ನು ಪರಿಶೀಲಿಸಿ 2 ತಿಂಗಳು ಆಯಿತು. ಇವತ್ತಿಗೂ

ಕೂಡ ಇದರ ರಿಪೋರ್ಟ್ ಇನ್ನೂ ಬರಲಿಲ್ಲ ಎಂದು ಹೇಳಿದರೆ, ನಿಜವಾಗಿಯೂ ಅವರನ್ನು 2 ಗಂಟೆಗೆ ಆಸ್ಪತ್ರೆಗೆ ಸೇರಿದ್ದಾನೆ, 5 ಗಂಟೆಯ ತನಕ ಚಿಕಿತ್ಸೆ ಕೊಡಲಿಲ್ಲ. ಎರಡನೆಯದಾಗಿ, ಪುನಃ ಉಡುಪಿಯಿಂದ ಬಂದವರು ತಪಾಸಣೆ ಮಾಡಿದ್ದಾರೆ. ಇವತ್ತಿನ ತನಕ 2 ತಿಂಗಳು ಆದರೂ ಒಂದು ರಿಪೋರ್ಟ್ಇಲ್ಲ ಅಂದರೆ ಎಷ್ಟೊಂದು ನಿರ್ಲಕ್ಷ್ಯತನದಿಂದ ಇದನ್ನು ವ್ಯವಹಾರ ಮಾಡುತ್ತಿದ್ದಾರೆ. ಇದು ನಿಜವಾಗಿಯೂ ಬಡ ಜನರಿಗೆ ಅಥವಾ ಹರಿಜನ ಗಿರಿಜನರಿಗೆ ಆಗುವಂಥ ಒಂದು ಅನ್ಯಾಯ ಎಂದು ನಾನು ಭಾವಿಸುತ್ತೇನೆ. ಮಾಡುವುದು ಬಹಳ ಜಾಸ್ತಿಯಾದುದರಿಂದ ನಿಜವಾಗಿ ಸಾಮಾನ್ಯ ಜನರ ಬದುಕು ಬಹಳ ಕಷ್ಟವಾಗಿದೆ.

ಅಧ್ಯಕ್ಷರು : ಆಯಿತು, ಇದು ಕ್ಲಾರಿಫಿಕೇಷನ್ ಅಲ್ಲ. ಇನ್ನು ಮುಂದಕ್ಕಂತೂ ಇದಕ್ಕೆ ಅವಕಾಶ ಇಲ್ಲ. ಈ ರೀತಿ ಗಮನ ಸೆಳೆಯುವ ಸೂಚನೆ ನಡೆಸಿದರೆ ಮುಗಿಯಿತು ನನ್ನ ಕತೆ.

ಶ್ರೀ ಆರ್.ಎಲ್. ಜಾಲಪ್ಪ : ಎರಡು ಕಾಲಿಂಗ್ ಅಟೆನಷನ್‌ಗೆ ಒಂದು ಗಂಟೆಯಾದರೆ ಹೇಗೆ? ಈ ಸದನ ನಡೆಯುತ್ತಿದೆ ಎಂದು ಅರ್ಥವಾಗಲಿಲ್ಲ. ತಾವು ಸ್ವಲ್ಪ ಡಿಸ್ಟ್ರಿಕ್ಟ್ ಮಾಡಬೇಕು.

ಶ್ರೀ ಐ.ಎಂ. ಜಯರಾಮಶೆಟ್ಟಿ : ತಾವು ನೋಡಬೇಕಾಗುತ್ತದೆ. ಅಷ್ಟೊಂದು ದಾರುಣ ಪರಿಸ್ಥಿತಿಯಲ್ಲಿ ತಾವು ಕ್ರಿಯೇಟ್ ಮಾಡಿದಿರಿ, ಎರಡೆರಡು ತಿಂಗಳಾದರೂ ರಿಪೋರ್ಟ್ ಬರಲಿಲ್ಲ ಎಂದು ಹೇಳಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಈಗ ನಿಯಮ 351ರ ಅಡಿಯಲ್ಲಿ ಬರುವ ಸೂಚನೆಗಳು ಸುರೇಶ್ ಕುಮಾರ್ ರವರು.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನನ್ನದು ಒಂದು ಕಾಲಿಂಗ್ ಅಟೆಷನ್ ಇತ್ತು. ಅದಕ್ಕೆ ನಿನ್ನೆ ಉತ್ತರ ಕೊಡಲಿಲ್ಲ. ಅದನ್ನು ಇವತ್ತು ಕೊಡುತ್ತೇನೆ ಎಂದು ಹೇಳಿದ್ದರು.

ಅಧ್ಯಕ್ಷರು : ಆಯಿತು ಕೊಡಿಸೋಣ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಈ ವಿಚಾರದಲ್ಲಿ ನಾನು ಎರಡು ವಿಚಾರಗಳನ್ನು ಹೇಳಬೇಕಾಗಿದೆ.

ಅಧ್ಯಕ್ಷರು : ನೀವು ಹೇಳಲಿಕ್ಕೆ ಬರುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾನು ಹೇಳಲೇಬೇಕಾದಂಥ 2 ವಿಚಾರಗಳಿವೆ. ಏಕೆಂದರೆ

ಅಧ್ಯಕ್ಷರು : ಖರ್ಗೆಯವರೇ, ಅವರು ಸಿಗ್ನೇಟರಿ ಅಲ್ಲ. ಇದು ಹೇಗೆ ಸಾಧ್ಯ? ನಾನು ಹೇಳುವುದಕ್ಕೆ ಆಗುವುದಿಲ್ಲ. ನೀವೇ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಕುಂದಾಪುರದ ಎಂ.ಎಲ್.ಎ. ಆಗಿರುವುದರಿಂದ, ಕಾಂಗ್ರೆಸ್ ಪಾರ್ಟಿ ಹೆಸರು ಬಂದಿದ್ದರಿಂದ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ, If there is any reference made to him directly, he has to explain.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಹೆಸರು ಸೂಚಿಲ್ಲ, ಆದರೆ ಕಾಂಗ್ರೆಸ್ ಕಾರ್ಯಕರ್ತ ಎಂದು ಸೂಚಿಸಿದ್ದಾರೆ. ಎರಡನೆಯದಾಗಿ ಶಹಪುರಕ್ಕೆ ಬಂದಿದ್ದಾಗಿ ಸೂಚಿಸಿದ್ದಾರೆ. ಆ ಎರಡರ ಬಗ್ಗೆ ನಾನು ಸ್ಪಷ್ಟೀಕರಣ ಕೊಡುತ್ತೇನೆ.

ಅಧ್ಯಕ್ಷರು : ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ನಾನು ಪ್ರೊಸೀಡಿಂಗ್ಸ್ ತರಿಸಿ ನೋಡುತ್ತೇನೆ, ನಾನು ಇಲ್ಲಿಗೆ ಸ್ವಲ್ಪ ತಡವಾಗಿ ಬಂದೆ. ಪ್ರತ್ಯಕ್ಷವಾಗಲೀ, ಪರೋಕ್ಷವಾಗಿ ಆಗಲೀ ನಿಮಗೆ ಅನ್ವಯಿಸತಕ್ಕಂಥ ಮಾತುಗಳನ್ನು ಏನಾದರೂ ಹೇಳಿದ್ದರೆ ನಾಳೆ ತಮಗೆ ಸ್ಪಷ್ಟೀಕರಣ ಕೊಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಯಾವುದೇ ಒಬ್ಬ ಸದಸ್ಯರ ಮೇಲೆ ಒಂದು ಆರೋಪಣೆ ಬಂದಾಗ ಸದಸ್ಯರಿಗೆ ಸ್ಪಷ್ಟೀಕರಣ ಕೊಡುವುದಕ್ಕೆ ಕಾರಣ ಕೊಡಬೇಕಾದುದು ನನ್ನ ಕರ್ತವ್ಯ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾನು ನಂತರ ಸ್ಪಷ್ಟೀಕರಣ ಕೊಡುವುದೇನಿಲ್ಲ.

(ಗೊಂದಲ)

ನಾನು ಹೆಚ್ಚು ಮಾಡನಾಡಲು ಇಷ್ಟಪಡುವುದಿಲ್ಲ. ಶಹಪುರಕ್ಕೆ ಬಂದಿದ್ದರು ಅನ್ನುವಂಥ ಒಂದು ಆಪಾದನೆಯನ್ನು ಮಾಡಿದ್ದಾರೆ. ಒಂದು ವೇಳೆ ಶಹಪುರಕ್ಕೆ ಬಂದದ್ದು ಹೌದು ಎಂದು ಆದರೆ ನಾನು ರಾಜಕೀಯ ನಿವೃತ್ತಿ ತೆಗೆದುಕೊಳ್ಳುತ್ತೇನೆ ಎಂದು ಹೇಳುವುದಿಲ್ಲ, ರಾಜೀನಾಮೆ ಕೊಡುತ್ತೇನೆ ಎಂದು ಹೇಳುವುದಿಲ್ಲ, ಸನ್ಯಾಸ ತೆಗೆದುಕೊಳ್ಳುತ್ತೇನೆ ಎಂದು ಹೇಳುವುದಿಲ್ಲ. ಇದೆಲ್ಲಾ ಈಗ ಔಟ್ ಡೇಟೆಡ್. ನೀವು ಬಿ.ಜೆ.ಪಿಯವರು ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ಆ ತೀರ್ಮಾನಕ್ಕೆ ನಾನು ಬದ್ಧ ಎಂದು ಇಷ್ಟನ್ನು ಮಾತ್ರ ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರುಗಳು ನನ್ನ ಹೇಳಿಕೆಯ ಮೇಲೆ ಅನೇಕ ರೀತಿಯ ವಿವರಣೆಗಳನ್ನು ಕೇಳಿದ್ದಾರೆ. ಈ ವಿವರಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ಅನೇಕ ಆಪಾದನೆಗಳನ್ನೂ ಸಹಿತ ಮಾಡಿದ್ದಾರೆ. ಪೋಲೀಸರು ನಿಷ್ಪ್ರೀಯರಾಗಿದ್ದಾರೆ ಎಂದು ಹೇಳಿದ್ದಾರೆ, ನಿಷ್ಪ್ರೀಯರಾಗಿಲ್ಲ. ಪೋಲೀಸರ ಮೇಲೆ ಒತ್ತಡ ಇದೆ ಎಂದು ಕೇಳಿದ್ದಾರೆ, ಒತ್ತಡ ಇಲ್ಲ ಮತ್ತು ಪೋಲೀಸರು ಆಡಳಿತ ಪಕ್ಷದ ಕೈಗೊಂಬೆಯಾಗಿದ್ದಾರೆ ಎಂದು ಹೇಳಿದ್ದಾರೆ, ಅದೂ ಇಲ್ಲ. ಈ ಮೂರನ್ನೂ ಸಹ ಯಾವ ಉದ್ದೇಶದಿಂದ ಗೌರವಾನ್ವಿತ ಸದಸ್ಯರುಗಳು ಹೇಳುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಜಾತಿ ವೈಶಮ್ಯದಿಂದ ಇದು ಆಗಿರತಕ್ಕಂಥಾದ್ದು ಎಂದು ಕೆಲವರು ಹೇಳಿದ್ದಾರೆ. ಮತ್ತು ರಾಮಕೃಷ್ಣ ದೂರು ಕೊಟ್ಟಮೇಲೂ ಸಹಿತ ಪೋಲೀಸಿನವರು ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಅದರ ಬಗ್ಗೆ ನಾನು ವಿಚಾರಣೆಯನ್ನು ಮಾಡಿಸುತ್ತೇನೆ. ಒಬ್ಬ ಪರ್ಟಿಕ್ಯುಲರ್ ಆಫೀಸರ್

ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ, ಅವರನ್ನು ಮತ್ತೆ ಸಿ.ಓ.ಡಿ.ಗೆ ಹಾಕಿದ್ದಾರೆ ಎಂದೂ ಹೇಳಿದ್ದಾರೆ. ಸಿ.ಓ.ಡಿಗೆ ಹಾಕಿದ್ದು ನಿಜ. ಅದನ್ನು ನಾವು ತೆಗೆದಿದ್ದೇವೆ, ಸಸ್ಪೆಂಡ್ ಮಾಡಿದ್ದೇವೆ, ಇದನ್ನು ನಾನು ಹೇಳುತ್ತಿದ್ದೇನೆ, ಇದು ಮೊದಲನೆಯದಾಗಿ. ಎರಡನೆಯದಾಗಿ, ಅನೇಕ ಸಂಶಯಗಳನ್ನು ಗೌರವಾನ್ವಿತ ಸದಸ್ಯರುಗಳು ಇಲ್ಲಿ ಹೇಳುತ್ತಿರುವುದರಿಂದ ಒಂದುಂತೂ ಹೇಳುತ್ತೇನೆ, ಪೋಲೀಸರು ನಮ್ಮ ಆಡಳಿತ ಪಕ್ಷದ ಕೈಗೊಂಬೆಗಳಲ್ಲ. We have absolutely no vested interest. Ours is an open government. We are having on open mind. ಸಿ.ಓ.ಡಿ. ಮೂಲತ ತನಿಕೆ ಮಾಡಿಸಿ ಎಂದು ಹೇಳಿದ್ದಾರೆ. ನಾನು ಒಪ್ಪಿಕೊಂಡಿದ್ದೇನೆ. I have already referred this matter to COD.

ಶ್ರೀ ಶಿವಾನಂದ ಎಸ್. ಪಾಟೀಲ್ : ನನ್ನದೊಂದು ಗಮನ ಸೆಳೆಯುವ ಸೂಚನೆ ಇತ್ತು.

ಅಧ್ಯಕ್ಷರು : ಆಯಿತು, ತರಿಸಿ ಕೊಡುತ್ತೇನೆ.

ನಿಯಮ 351ರ ಮೇರೆಗೆ

(ಅ) ಬೆಂಗಳೂರು ನಗರದ ಮಿಂಟೋ ಕಣ್ಣಾಸ್ಪತ್ರೆ ಲೇಸರ್ ಉಪಕರಣದ ದುರಸ್ತಿ.

ಶ್ರೀ ಸುರೇಶ್ ಕುಮಾರ್ (ರಾಜಾಜಿನಗರ ಕ್ಷೇತ್ರ) : ಮಾನ್ಯ ಸಭಾಧ್ಯಕ್ಷರೇ, ಬೆಂಗಳೂರು ನಗರದ ಮಿಂಟೋ ಕಣ್ಣಿನ ಆಸ್ಪತ್ರೆಯಲ್ಲಿ ಲೇಸರ್ ಉಪಕರಣವೊಂದು ಕಳೆದ 2 ವರ್ಷಗಳಿಂದ ಕೆಟ್ಟು ಹೋಗಿದೆ. ಇದರಿಂದ ಮಧುಮೇಹ ಕಾಯಿಲೆಯುಳ್ಳ ಕಣ್ಣಿನ ರೋಗಿಗಳಿಗೆ ವಿಪರೀತ ತೊಂದರೆ ಉಂಟಾಗಿದೆ. ಖಾಸಗಿ ಚಿಕಿತ್ಸಾ ಕೇಂದ್ರಗಳಲ್ಲಿ ಈ ಚಿಕಿತ್ಸೆ ತುಂಬಾ ದುಬಾರಿಯಾಗಿದ್ದು, ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದ ಜನತೆಗೆ ದುಸ್ತರವಾಗಿದೆ. ಲೇಸರ್ ಉಪಕರಣದ ದುಸ್ಥಿತಿಯ ಬಗ್ಗೆ ಸಂಬಂಧಪಟ್ಟವರ ಗಮನ ಸೆಳೆದಿದ್ದರೂ ಇದುವರೆಗೆ ರಿಪೇರಿ ಆಗಿಲ್ಲ. ಕೂಡಲೇ ಅಗತ್ಯ ಕ್ರಮ ಜರುಗಿಸಿ ಪ್ರತಿದಿನ ನೂರಾರು ಬಡರೋಗಿಗಳಿಗೆ ಅಗತ್ಯವಿರುವ ಈ ಉಪಕರಣ ಮತ್ತೆ ಸಿದ್ಧಗೊಳ್ಳುವಂತೆ ಮಾಡಬೇಕೆಂದು ವೈದ್ಯಕೀಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಮಿಂಟೋ ಕಣ್ಣಾಸ್ಪತ್ರೆಯಲ್ಲಿ ಇರುವ ಲೇಸರ್ ಉಪಕರಣವನ್ನು 6 ವರ್ಷಗಳ ಹಿಂದೆ ಖರೀದಿಸಿದ್ದು, ಯಾವುದೇ ತೊಂದರೆಯಿಲ್ಲದೆ ಕಾರ್ಯ ನಿರ್ವಹಿಸಿರುತ್ತದೆ. ಈ ಉಪಕರಣವು ಕಳೆದ ವರ್ಷ ಮಾರ್ಚಿ 1995 ರಿಂದ ಕೆಟ್ಟು ಹೋಗಿರುತ್ತದೆ. ಈ ಉಪಕರಣವು ದುರಸ್ತಿ ಮಾಡಿಸಲು 17,820 ಯು.ಎಸ್. ಡಾಲರಗಳು (ಭಾರತೀಯ ಹಣ ಸುಮಾರು ರೂ. 6,23,700-00ಗಳು ಬೇಕಾಗಿರುತ್ತದೆ) ಈ ಹಣವನ್ನು ಸರ್ಕಾರದ ವತಿಯಿಂದ ಬಿಡುಗಡೆ ಮಾಡಲಾಗಿದೆ.

ಮೇಲಿನ ಉಪಕರಣವನ್ನು ಮೆಸರ್ಸ್ ಲೇಸರ್ ಫನ್‌ಲೆಂಡ್ ಸಂಸ್ಥೆಯಿಂದ ದುರಸ್ಥಿ ಮಾಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಕೂಡಲೇ ದುರಸ್ತಿ ಮಾಡಿಸಿ, ಸಾರ್ವಜನಿಕರ ಉಪಯೋಗಕ್ಕೆ ಒದಗಿಸಲಾಗುವುದು.